ಸಾಕ್ಷಿಯನ್ನು ದಿನಾಂಕ 15-10-2022 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ ಜಿಲ್ಲಾ ಸರ್ಕಾರಿ ವಕೀಲರಿಂದಃ**

ಸ.ನಂ. 62/2 ರಲ್ಲಿ 32 ಗುಂಟೆ ಜಮೀನು, 62/4 ರಲ್ಲಿ ಐದೂವರೆ ಗುಂಟೆ ಜಮೀನು , 62/5 ರಲ್ಲಿ ಎರಡು ಮುಕ್ಕಾಲು ಗುಂಟೆ , 62/6 ರಲ್ಲಿ ಮೂರು ಗುಂಟೆ ಜಮೀನು ಮತ್ತು ಸ.ನಂ. 62/2 ರಲ್ಲಿ ಮತ್ತೊಂದು ಎರಡು ಕಾಲು ಗುಂಟೆ ಜಮೀನನ್ನು ರಸ್ತೆಯ ಅಭಿವೃದ್ದಿಗಾಗಿ ತೆಗೆದುಕೊಂಡಿದ್ದಾರೆ. ನಾನು ಈ ಮೇಲೆ ಹೇಳಿದಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಗುಂಟೆ ಲೆಕ್ಕದಲ್ಲಿ ಒಂದು ಗುಂಟೆಗೆ 1800 ರೂ. ನಂತೆ ಪಾವತಿ ಮಾಡಿದರು. ಗುಂಟೆ ಲೆಕ್ಕದಲ್ಲಿ ಪಾವತಿ ಮಾಡಲು ಬಂದಾಗ ನಾನು ತೆಗೆದುಕೊಳ್ಳಲಿಲ್ಲ, ಅಡಿ ಲೆಕ್ಕದಲ್ಲಿ ಕೊಟ್ಟ 15,76,323/- ರೂ. ಗಳನ್ನು ತೆಗೆದುಕೊಂಡಿದ್ದೇನೆ. ಹಣ ಪಡೆಯುವ ಸಮಯದಲ್ಲಿ ನಾನು ತಕರಾರನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಖುಷ್ಕಿ ಜಮೀನು. ನಾನು ಜಮೀನನ್ನು ಭೂ ಪರಿವರ್ತನೆ ಮಾಡಿಸಿದ್ದೇನೆ. ನಮ್ಮ ಜಮೀನಿನ ಪಕ್ಕದಲ್ಲಿ ಮನೆಗಳಿಲ್ಲ ಎಂದರೆ ಸರಿಯಲ್ಲ. ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಉಪನೋಂದಣಾಧಿಕಾರಿಗಳು ಏನು ಬೆಲೆ ನಿಗಧಿ ಮಾಡಿದ್ದರೋ ಅದರಂತೆ ನಾಲ್ಕು ಪಟ್ಟು ಪಾವತಿ ಮಾಡಿದ್ದಾರೆ ಎಂದರೆ ಕಡಿಮೆ ನೀಡಿದ್ದಾರೆ. ನಮ್ಮ ಜಮೀನು ಫಲವತ್ತಾಗಿ ಇರಲಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಸರ್ವೆ ನಂಬರ್ ಗಳಲ್ಲೂ ಸೇರಿ 18 ಗುಂಟೆ ಜಮೀನು ಉಳಿದಿದೆ. ನಮ್ಮ ಬೇರೆ ಜಮೀನನ್ನು ಎಕರೆಗೆ ಒಂದು ಲಕ್ಷದಂತೆ ಮಾರಾಟ ಮಾಡಿದ್ದೇನೆ. ಸ್ವಾಧೀನಪಡಿಸಿಕೊಂಡ ಸಮಯದಲ್ಲಿ ಒಂದು ಅಡಿಗೆ 200 ರೂ. ಮೌಲ್ಯ ಇತ್ತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನಮ್ಮ ಜಮೀನನ್ನು ರಸ್ತೆಯ ವಿಸ್ತರಣೆಗಾಗಿ ತೆಗೆದುಕೊಂಡಿರುವುದರಿಂದ ನನ್ನ ಉಳಿಕೆ ಜಮೀನಿಗೆ ಹೆಚ್ಚಿನ ಬೆಲೆ ಬಂತು ಎಂದರೆ ಸರಿ. ಪರಿಹಾರವನ್ನು ನ್ಯಾಯಯುತವಾಗಿ ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ

ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.